ಶ್ರೀ ಡಿ.ಜಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)

ಅ) ಇಲ್ಲ

ಆ) ಹೌದು

ಇ) ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ರಾಜ್ಯದಲ್ಲಿರುವ ಹಸಿರು ಕಾರ್ಡು ಪಡಿತರದಾರರ ಸಂಖ್ಯೆ ಬಗ್ಗೆ

2813 (3523) ಶ್ರೀ ಗುರುಪಾದ ಗೌಡ ಸಂಗನ ಗೌಡ ಪಾಟೀಲ್ (ರೋಣ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುರೆ?

ಅ) 1999-2000 ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಹಸಿರು ಕಾರ್ಡು ಪಡಿತರದಾರರ ಸಂಖ್ಯೆ ಎಷ್ಟು?

ಆ) ಇವರಲ್ಲಿ ನಕಲು ಪಡಿತರದಾರರ ಸಂಖ್ಯೆ ಎಷ್ಟು?

ಇ) ಹೊಸದಾಗಿ ಮಾಡಿದ ಸಮೀಕ್ಷೆ ಆಧರಿಸಿ, ಎಷ್ಟು ಕುಟುಂಬಗಳಿಗೆ ಪಡಿತರ ಕಾರ್ಡು ವಿತರಿಸಬೇಕಾಗಿದೆ?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)

ಅ) ಮಾರ್ಚಿ 2000 ರ ಅಂತ್ಯಕ್ಕೆ ರಾಜ್ಯದಲ್ಲಿ ಇದ್ದ ಹಸಿರು ಕಾರ್ಡುಗಳ ಸಂಖ್ಯೆ 64, 64, 171.

ಆ) ನಕಲು ಪಡಿತರ ಚೀಟಿಗಳನ್ನು ಪತ್ತೆ ಹಚ್ಚುವ ಕಾರ್ಯವು ನಿರಂತರ ಪ್ರಕ್ರಿಯೆಯಾಗಿರುತ್ತದೆ. ದಿನಾಂಕ: 1-4- 99ರಿಂದ 31-3-2000ರ ಅಂತ್ಯಕ್ಕೆ 68, 136, ರದ್ದುಪಡಿಸಲಾಗಿದೆ. ನಕಲು ಪಡಿತರ ಚೀಟಿಗಳ ನಿಖರವಾದ ಸಂಖ್ಯೆ ಹೇಳಲು ಬರುವುದಿಲ್ಲ.

ಇ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಶಾಖೆಯಿಂದ ಸಿದ್ಧಪಡಿಸಲಾಗಿರುವ ಆರ್ಥಿಕ ಸಮೀಕ್ಷೆ ಪಟ್ಟಿಯನ್ನು ಆಧರಿಸಿ, ಗ್ರಾಮೀಣ ಪ್ರದೇಶದ 20,35, 812 ಕುಟುಂಬಗಳಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಬೇಕಾಗಿದೆ.

ಸದನದಲ್ಲಿ ಆಯೋಗಗಳ ವರದಿಗಳ ಮಂಡನೆ

2814(3557) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಜಗನ್ನಾಥ ಶೆಟ್ಟಿ, ರಾಮಚಂದ್ರಯ್ಯ ಆಯೋಗಗಳ ವರದಿಯನ್ನು ಇಲ್ಲಿಯವರೆಗೆ ಸದನದಲ್ಲಿ ಮಂಡಿಸದಿರಲು ಕಾರಣಗಳೇನು?

2) ವರದಿಗಳನ್ನು ಸದನದಲ್ಲಿ ಆದಷ್ಟು ಶೀಘ್ರ ಮಂಡಿಸುವಲ್ಲಿ ಸರ್ಕಾರದ ನಿಲುವೇನು? ಯಾವಾಗ ವರದಿಗಳನ್ನು ಮಂಡಿಸಲಾಗುವುದು?

3) ವರದಿಗಳು ಸರ್ಕಾರಕ್ಕೆ ತಲುಪಿ ಎಷ್ಟು ದಿನಗಳಾಗಿದೆ? ವಿವರ ನೀಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :-

1) ಈ ಎರಡು ವಿಚಾರಣಾ ಆಯೋಗಗಳ ವರದಿಗಳು 5 ಸಂಪುಟಗಳನ್ನೊಳಗೊಂಡಿದ್ದು ಅವುಗಳನ್ನು ಕೂಲಕುಂಷವಾಗಿ ಪರಿಶೀಲಿಸುವ ಅವಶ್ಯತಗೆ ಇರುವುದರಿಂದ ಸದನದಲ್ಲಿ ಮಂಡಿಸಲು ಸಾಧ್ಯವಾಗಿಲ್ಲ.

2) ವರದಿಗಳಲ್ಲಿನ ಶಿಫಾರಸ್ಸುಗಳನ್ನು ಸರ್ಕಾರವು ಪರಿಶೀಲಿಸಿದ ನಂತರ ಸದರಿ ವರದಿಗಳನ್ನು ಸದನದಲ್ಲಿ ಶೀಘ್ರವೇ ಮಂಡಿಸಲಾಗುವುದು.

3) 1) ನ್ಯಾಯಮೂರ್ತಿ ಕೆ.ಜಗನ್ನಾಥ ಶೆಟ್ಟಿ ವಿಚಾರಣಾ ಆಯೋಗವು ತನ್ನ ವರದಿಯನ್ನು ದಿನಾಂಕ 27-02- 1997 ರಂದು ಸಲ್ಲಿಸಿದೆ. ಹಾಗೂ ನ್ಯಾಯ ಮೂರ್ತಿ ಕೆ.ರಾಮಚಂದ್ರಯ್ಯ ವಿಚಾರಣಾ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ದಿನಾಂಕ 31-3-98 ರಂದು ಸಲ್ಲಿಸಿದೆ.

ಕಲ್ಯಾಣ ಮಂಟಪಗಳಿಗೆ ಹೆಚ್ಚಿನ ತೆರಿಗೆ ವಿಧಿಸಿರುವ ಬಗ್ಗೆ

2816(3842) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 2000-2001ನೇ ಸಾಲಿನ ಬಡ್ಜೆಟ್‌ನಲ್ಲಿ ಖಾಸಗಿ ಹಾಗೂ ಸಂಘ ಸಂಸ್ಥೆಗಳು ನಡೆಸುತ್ತಿರುವ ಕಲ್ಯಾಣ ಮಂಟಪಗಳ ಮೇಲೆ ಶೇ. 15 ರಷ್ಟು ಹೆಚ್ಚಿನ ತೆರಿಗೆಯನ್ನು ವಿಧಿಸಿರುವುದರಿಂದ ಸಾಮಾನ್ಯ ಜನರಿಗೆ ಮತ್ತು ಸಣ್ಣಪುಟ್ಟ ಕಲ್ಯಾಣ ಮಂಟಪಗಳಿಗೆ ಆರ್ಥಿಕ ಹೊರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸಂಘ ಸಂಸ್ಥೆಗಳು ನಡೆಸುತ್ತಿರುವ ಕಲ್ಯಾಣ ಮಂಟಪಗಳಿಗೆ ತೆರಿಗೆ ವಿನಾಯಿತಿ ನಿಡಲು ಸರ್ಕಾರದವರು ಪರಿಶೀಲಿಸುವವರೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು):-

ಅ) ಕಲ್ಯಾಣ ಮಂಟಪದವರು ಹೆಚ್ಚಿನ ಬಾಡಿಗೆ ಪಡೆದುಕೊಳ್ಳುತ್ತಿದ್ದರೂ ಸಹ ತೆರಿಗೆ ತಪ್ಪಿಸುವ ದೃಷ್ಟಿಯಿಂದ ಬಾಡಿಗೆಯನ್ನು ಬೇರೆ ಬೇರೆಯಾಗಿ ಅಂದರೆ ನೀರು ವಿದ್ಯುತ್, ಪಾತ್ರೆಗಳು, ಅನಿಲ, ಪೀಠೋಪಕರಣಗಳು ಇನ್ನೂ ಮುಂತಾದವುಗಳೆಂದು ವಿಭಜಿಸಿ ತೆರಿಗೆ ತಪ್ಪಿಸಲು ಪ್ರಯತ್ನಪಟ್ಟರುವುದು ಸರ್ಕಾರದ ಗಮನಕ್ಕೆ ಬಂದ ಕಾರಣ ವಿನಾಯಿತಿ ಮಿತಿಯನ್ನು ರೂ 10,000ದಿಂದ ರೂ. 2,000 ಕ್ಕೆ ಇಳಿಸಿ ಕಲ್ಯಾಣ ಮಂಟಪಗಳಿಗೆ ಅನ್ವಯವಾಗುವಂತೆ ಏಕರೂಪದ ತೆರಿಗೆ ಶೇ. 15 ರಷ್ಟು ವಿಧಿಸಿರುವುದು ಸೂಕ್ತವಿರುತ್ತದೆ.

ಸಾಮಾನ್ಯ ಜನರಿಗೆ ಹಾಗೂ ಬಡವರಿಗೆ ತೊಂದರೆ ಯಾಗದಿರುವಂತೆ ರೂ. 2,000 ಕ್ಕಿಂತ ಕಡಿಮೆ ಬಾಡಿಗೆ ವಸೂಲಿ ಮಾಡುತ್ತಿರುವ ಕಲ್ಯಾಣ ಮಂಟಪಗಳಿಗೆ ವಿಲಾಸ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿದೆ.

ಆ) ಉದ್ಭವಿಸುವುದಿಲ್ಲ.